೫) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಬಂಟವಾಳ ತಾಲ್ಲೂಕುಗಳಲ್ಲಿ ಅಂಗನವಾಡಿಗಳನ್ನು ತೆರೆಯುವುದು.

ಶ್ರೀ ರಮಾನಾಥ ರೈ — ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಅಂಗನವಾಡಿ ಯೋಜನೆಯಂತೆ ಅಂಗನವಾಡಿಗಳನ್ನು ತೆರೆದಿರುತ್ತದೆ. ಆದರೆ ನನ್ನ ವಿಧಾನಸಭಾ ಕ್ಷೇತ್ರವಾದ ಮಂಗಳೂರು ತಾಲ್ಲೂಕಿನ ಗ್ರಾಮೀಣ ಪ್ರದೇಶ ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಅಳವಡಿಸಿರುವುದಿಲ್ಲ. ಕಳೆದ ವಿಧಾನಸಭಾ ಅಧಿವೇಶನದಲ್ಲಿ ಈ ಯೋಜನೆಯನ್ನು ಅಳವಡಿಸಿ ಅಂಗನವಾಡಿ ಕೇಂದ್ರಗಳನ್ನು ತೆರೆಯುವಂತೆ ಆಗಿನ ಸಮಾಜ ಕಲ್ಯಾಣ ಸಚಿವರು ಭರವಸೆ ನೀಡಿದ್ದರು. ಆದರೂ ಈ ತನಕ ಈ ಯೋಜನೆ ಕಾರ್ಯಗತವಾಗಿರುವುದಿಲ್ಲ. ಆದುದರಿಂದ ಕೂಡಲೇ ಈ ಯೋಜನೆಯನ್ನು ಅಳವಡಿಸಿಕೊಂಡು ಅಂಗನವಾಡಿ ಕೇಂದ್ರಗಳನ್ನು ತೆರೆಯುವಂತೆ ಸರಕಾರದ ಮುಖೇನ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಇದು ಸಮಗ್ರ ಬಾಲ ವಿಕಾಸ ಯೋಜನೆ ಈ ಯೋಜನೆಯನ್ನು ಕೇಂದ್ರ ಸರಕಾರ ಮಂಜೂರ್ಮಾಡಬೇಕು. ಈಗ ನಮ್ಮ ರಾಜ್ಯದಲ್ಲಿ ಳಳ ತಾಲ್ಲೂಕುಗಳಲ್ಲಿ ಈ ಯೋಜನೆ ಇದೆ, ಪ್ರಸ್ತುತ ವರ್ಷ ೨೬ ತಾಲ್ಲೂಕುಗಳಿಗೆ ಸಮಗ್ರ ಬಾಲ ವಿಕಾಸ ಯೋಜನೆಯನ್ನು ಮಂಜೂರ್ಮಾಡಬೇಕು ಕೇಂದ್ರಕ್ಕೆ ಕಳಿಸಿದ್ದೇವೆ. ಇನ್ನೂ ಕೇಂದ್ರ ಸರಕಾರದ ಅನುಮತಿ ದೊರೆತ್ತಿಲ್ಲ.

ಶ್ರೀ ಬಿ. ಗಂಗಣ್ಣ.—

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ)

6)ವಿಧವೆಯರಿಗೆ ಮಾಶಾಸನ ಹಾಗೂ ವೈದ್ಯಾಪ್ಯ ವೇತನವನ್ನು ಬಟವಾಡೆ ಮಾಡುವುದು

ಶ್ರೀ ವಸಂತ ವಿ. ಶಾಲಿಯಾನ.—ಮಾನ್ಯ ಅಧ್ಯಕ್ಷರೇ. ನಿರ್ಗತಿಕ ವಿಧವೆಯರಿಗೆ ಮಾಸಾಶನ, ವೈದ್ಯಾಪ್ಯ ವೇತನ, ಅಂಗವಿಕಲ ವೇತನ ಇತ್ಯಾದಿಗಳು ಕಳೆದ ಸಮಾರು ನಾಲ್ಕು ತಿಂಗಳುಗಳಿಂದ ಸರಿಯಾಗಿ ಬಟವಾಡೆಯಾಗಿರುವುದಿಲ್ಲ. ಇದರಿಂದ ಇಂತಹ ಪ್ರಯೋಜನದಾರರು ಬಹಳಷ್ಟು ತೊಂದರೆ ಪಡುತ್ತಿದ್ದಾರೆ. ಸರಕಾರ ಇದನ್ನು ಪರಿಶೀಲಿಸಿ ಆದಷ್ಟು ಶೀಘ್ರ ಇದನ್ನು ಬಟವಾಡೆ ಮಾಡಲು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಇದು ಸರಕಾರದ ಗಮನಕ್ಕೆ ಬಂದಿದೆ. ಆದಷ್ಟು ಬೇಗ ಬಟವಾಡೆ ಮಾಡುವ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವಸಂತ ಬಂಗೇರ,—

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ)

೭) ಬೀದರ್ ಜಿಲ್ಲೆಯಲ್ಲಿ ಉರ್ದು ಶಾಲೆಗಳಿಗೆ ಉರ್ದು ಶಿಕ್ಷಕರ ಹುದ್ದೆಗಳ ನಿರ್ಮಾಣ

Sri MOHAMMED LAIQUDDIN.— In Bidar District, thare are hundreds of Urdu Primary Schools and in many Kannada Primary School also there are parallel classes in Urdu. There is stagnation of Urdu Classes as new classes are not opened progressively in severals schools of Urdu medium Due to this, the Urdu students are leaving schools and education in the midway. This is causing serious repurcussion on their future carrier. It is the primary duty of the Government to impart education in their mother tongue at primary level to all children of the State compulsorily, but the